ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ. ಎಂ. ಎಫ್. ಸಿ. ನ್ಯಾಯಾಲಯ

ಹಿರೇಕೆರೂರು

ಸಿ.ಸಿ. ನಂಃ 447/2024

ಸಿ.ಡಬ್ಲ್ಯೂಃ 1

**ಪಿ.ಡಬ್ಲ್ಯೂಃ 1**

ಸಾಕ್ಷಿದಾರರ ಹೆಸರುಃ - ಶ್ರೀಮತಿ ಇಂದಿರವ್ವ

ಗಂಡನ ಹೆಸರು - ಶಿವಾನಂದಪ್ಪ ಬಣಕಾರ

ವಯಸ್ಸುಃ - 52 ವರ್ಷ

ಉದ್ಯೋಗ - ಮನೆ ಕೆಲಸ

ವಾಸಸ್ಥಳ - ಹಿರೇಯಡಚಿ

ದಿನಾಂಕಃ 01-07-2025 ರಂದು ಸಾಕ್ಷಿಯನ್ನು ಕರೆಯಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ - ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ಆರೋಪಿಗಳು ನಮ್ಮ ಸಂಬಂಧಿಕರು. ಚಾಸಾ-4 ನನ್ನ ಮಗ. ಚಾಸಾ-5 ಮತ್ತು 6 ರವರ ನಮ್ಮ ಗ್ರಾಮದವರು. ದಿಃ 07-04-2024 ರಂದು ಬೆಳಿಗ್ಗೆ 10-00 ಗಂಟೆ ಸುಮಾರಿಗೆ ಚಾಸಾ-4 ರವರು ಎತ್ತುಗಳನ್ನು ಮೇಯಿಸಲು ಹೊಲಕ್ಕೆ ಹೋಗಿದ್ದಾಗ 1 ಮತ್ತು 2 ನೇ ಆರೋಪಿಗಳು ಏಕಾ ಏಕಿ ಜಗಳ ಮಾಡಿ ಕೈಯಿಂದ ಹಾಗೂ ಬಡಿಗೆಯಿಂದ ನೋವನ್ನುಂಟು ಮಾಡಿರುತ್ತಾರೆ. ಬಿಡಿಸಲು ಹೋದ ನನಗೆ 1 ನೇ ಆರೋಪಿಯು ಸೀರೆ ಹಿಡಿದು ಎಳೆದಾಡಿ ಅವಮಾನ ಮಾಡಿರುತ್ತಾರೆ. ಚಾಸಾ-5 ಮತ್ತು 6 ರವರು ಬಂದು ಜಗಳ ಬಿಡಿಸಿರುತ್ತಾರೆ. ಈ ಸಂಬಂಧ ನಾನು ದೂರು ನೀಡಿರುತ್ತೇನೆ. ನಾನು ನೀಡಿದ ದೂರಿನ ಮೇರೆಗೆ ದಿಃ 10-04-2024 ರಂದು ಘಟನಾ ಸ್ಥಳಕ್ಕೆ ಬೇಟಿ ನೀಡಿ ನಾನು ಸ್ಥಳ ತೋರಿಸಿದ ಮೇರೆಗೆ ಚಾಸಾ-2 ಮತ್ತು 3 ರವರ ಸಮಕ್ಷಮ ಮಹಜರ ಕ್ರಮ ಜರುಗಿಸಿ ಕೃತ್ಯಕ್ಕೆ ಬಳಸಲಾಗಿದೆ ಎನ್ನಲಾದ ಒಂದು ದೊಣ್ಣೆಯನ್ನು ಅಮಾನತ್ತು ಪಡಿಸಿಕೊಂಡರು. ವರದಿಗೆ ನನ್ನ ಹಾಗೂ ಸಾಕ್ಷಿದಾರರ ಸಹಿ ಪಡೆದುಕೊಂಡರು.

2. ಸಾಕ್ಷಿದಾರರಿಗೆ ಅವರ ಸಹಿ ಇರುವ ದಿಃ 09-04-2024 ರ ದೂರನ್ನು ಹಾಗೂ ದಿಃ 10-04-2024 ರ ಪಂಚನಾಮೆಯನ್ನು ತೋರಿಸಲಾಗಿ ಅದರಲ್ಲಿನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸದರಿ ದೂರು ಹಾಗೂ ಪಂಚನಾಮೆಯನ್ನು **ನಿಪಿ-1 ಮತ್ತು 2** ಎಂದು, ಅವುಗಳಲ್ಲಿನ ಸಾಕ್ಷಿದಾರರ ಸಹಿಗಳನ್ನು **ನಿಪಿ-1 ಎ** ಹಾಗೂ **2** ಎ ಎಂದು, ಎರಡು ಪೋಟೋಗಳನ್ನು **ನಿಪಿ-3 ಮತ್ತು 4** ಎಂದು, ಒಂದು ಬಡಿಗೆಯನ್ನು **ಎಂ.ಓ.-1** ಎಂದು ಗುರುತಿಸಲಾಯಿತು.

ಸಿ.ಸಿ. ನಂಃ 447/2024

ಸಿ.ಡಬ್ಲ್ಯೂಃ 1

**ಪಿ.ಡಬ್ಲ್ಯೂಃ 1**

**ಆರೋಪಿಗಳ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು )

ಓ ಹೆ ಕೆ ಸರಿ ಇದೆ ಎಂದು ಒಪ್ಪಿರುತ್ತಾರೆ.

ದಿನಾಂಕಃ 01-07-2025

Sd/-
ಹಿರಿಯ ಸಿ ಜೆ ಮತ್ತು ಜೆ. ಎಂ.ಎಫ್. ಸಿ,
ಹಿರೇಕೆರೂರು